# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 647 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 13/12/2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ವೇತನ ದೃಢೀಕರಣವನ್ನು ಸದರಿಯವರಿಗೆ ತಲುಪುತ್ತಿರುವ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ಧೃಢಪಡಿಸಿಕೊಳ್ಳುತ್ತಿದೆ; (ವಿವರ ಒದಗಿಸುವುದು) | ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು/ಕಾರ್ಮಿಕರ ವೇತನ ದೃಢೀಕರಣವನ್ನು ಆಯಾ ಇಲಾಖೆ/ಸಂಸ್ಥೆಗಳ ಮೂಲ ಮಾಲೀಕರು ಹಾಗೂ ಗುತ್ತಿಗೆದಾರರು ಮಾಡಬೇಕಾಗಿರುತ್ತದೆ.<br>ಕಾರ್ಮಿಕ ಇಲಾಖೆಗೆ, ಇಲಾಖೆಯ ಅನುಷ್ಠಾನಗೊಳಿಸುತ್ತಿರುವ ಕನಿಷ್ಠ ವೇತನ ಕಾಯ್ದೆ, 1948, ವೇತನ ಪಾವತಿ ಕಾಯ್ದೆ, 1936, ಗುತ್ತಿಗೆ ಕಾರ್ಮಿಕ ಕಾಯ್ದೆ, 1970, ಉಪಧನ ಪಾವತಿ ಕಾಯ್ದೆ, 1972, ಹೆರಿಗೆ ಭತ್ಯೆ ಕಾಯ್ದೆ 1961 ಹಾಗೂ ಅನ್ವಯಿಸುವ ಇತರೆ ಕಾರ್ಮಿಕ ಕಾಯ್ದೆಗಳನ್ವಯ ನಿರ್ದಿಷ್ಟ ದೂರುಗಳು ಬಂದಲ್ಲಿ ಸರ್ಕಾರದಿಂದ ಸದರಿ ಕಾಯ್ದೆಗಳಡಿ ಅಧಿಸೂಚಿಸಲ್ಪಟ್ಟ ಕಾರ್ಯವ್ಯಾಪ್ತಿಯ ನಿರೀಕ್ಷಕರು/ಅಧಿಕಾರಿಗಳು ತಪಾಸಣೆ ನಡೆಸುವ ಮೂಲಕ/ಕಾಲಕಾಲಕ್ಕೆ ತಪಾಸಣೆ ನಡೆಸುವ ಸಂದರ್ಭದಲ್ಲಿ ಕಾರ್ಮಿಕರ ಹೇಳಿಕೆ ಹಾಗೂ ವೇತನ ಪಾವತಿ ಮಾಡಿದ ದಾಖಲೆಗಳನ್ನು ಪರಿಶೀಲಿಸಿ ವೇತನ ಪಾವತಿಯಾದ ಬಗ್ಗೆ ದೃಢೀಕರಿಸಿಕೊಳ್ಳಲಾಗುತ್ತಿದೆ. ನಿಗದಿತ ವೇತನಕ್ಕಿಂತ ಕಡಿಮೆ ವೇತನ ನೀಡುವುದು ಹಾಗೂ ನಿಗದಿತ ಸಮಯಕ್ಕೆ ವೇತನ ನೀಡದಿದ್ದ ಪಕ್ಷದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |
| ಆ) | ಬೀದರ ಜಿಲ್ಲೆಯಲ್ಲಿ ಸಹಕಾರಿ ವ್ಯವಸ್ಥೆಯಲ್ಲಿ ವೇತನದ ಬಗ್ಗೆ ಧೃಡೀಕರಿಸಿಕೊಳ್ಳುತ್ತಿರುವ ವ್ಯವಸ್ಥೆ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ; (ವಿವರ ಒದಗಿಸುವುದು) | ಬೀದರ್ ಜಿಲ್ಲೆಯಲ್ಲಿ 2008 ರಲ್ಲಿ "ಬೀದರ್ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ" ವನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುತ್ತದೆ. ಸದರಿ ಸೊಸೈಟಿಯ ಮುಖಾಂತರ ಬೀದರ್ ಜಿಲ್ಲೆಯಲ್ಲಿನ ವಿವಿಧ ಸರ್ಕಾರದ ಇಲಾಖೆ/ನಿಗಮ/ಮಂಡಳಿಗಳಿಗೆ 2800 ಹೊರಗುತ್ತಿಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ.<br>ಸದರಿ ಸೊಸೈಟಿಯಿಂದ ನೇಮಕಾತಿ ಹೊಂದಿದ ಹೊರಗುತ್ತಿಗೆ ನೌಕರ/ಕಾರ್ಮಿಕರಿಗೆ ಇಲಾಖೆಯು ನಿಗದಿಪಡಿಸಿದ ಕನಿಷ್ಠ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ನೌಕರರ/ಕಾರ್ಮಿಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತದೆ ಹಾಗೂ ಅನ್ವಯಿಸುವ ಇ.ಪಿ.ಎಫ್ ಮತ್ತು ಇ.ಎಸ್. ಐ. ವಂತಿಕೆಯನ್ನು ಸಂಬಂಧಿಸಿದ ಇಲಾಖೆಗಳಿಗೆ ನಿಗದಿತ ಸಮಯಕ್ಕೆ ನಿಯಮಾನುಸಾರ ಜಮೆ ಮಾಡಲಾಗುತ್ತಿದೆ. |
| ಇ) | ಸದರಿ ಜಿಲ್ಲೆಯಲ್ಲಿ ದೃಢೀಕರಿಸುತ್ತಿರುವ ವ್ಯವಸ್ಥೆಯಲ್ಲಿ ರಾಜ್ಯದಲ್ಲಿ ಸರ್ಕಾರ ಮತ್ತು ಖಾಸಗಿ ವಲಯಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರುವ ಬಗ್ಗೆ ಅಗತ್ಯವಿರುವ ನೀತಿ ನಿಯಮಗಳನ್ನು ಸರ್ಕಾರ ರಚಿಸುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ನೀತಿ ನಿಯಮಗಳನ್ನು ರಚಿಸಲಾಗುವುದು? (ವಿವರ ಒದಗಿಸುವುದು) | ಬೀದರ್ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ನೌಕರರನ್ನು ನಿಯೋಜಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 2008 ರಲ್ಲಿ ರಚನೆಯಾಗಿರುವ "ಬೀದರ್ ಜಿಲ್ಲಾ ಕಾರ್ಮಿಕರ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ" ವು ಅಸ್ತಿತ್ವದಲ್ಲಿದ್ದು ಸದರಿ ಸಂಘದ ಮಾದರಿಯಲ್ಲಿ ಪ್ರಸ್ತುತ ಮೈಸೂರು, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಒದಗಿಸುವ ಸಂಬಂಧ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 7 ರನ್ವಯ ಸಹಕಾರ ಸಂಘ (ಸೊಸೈಟಿ) ಅನ್ನು ನೋಂದಾಯಿಸಲು ಸರ್ಕಾರದ ಆದೇಶ ಸಂಖ್ಯೆ: ಕಾಇ 301 ಎಲ್‌ಡಬ್ಲ್ಯೂಎ 2023, ದಿನಾಂಕ; 01/10/2024 ರನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. (ಅನುಬಂಧದಲ್ಲಿರಿಸಿದೆ). |

**ಕಡತ ಸಂಖ್ಯೆ: ಕಾಇ 515 ಎಲ್‌ಡಬ್ಲ್ಯೂಎ 2024**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

ಅನುಬಂಧ - 1

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಂಘ (ನಿ) ವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರಚಿಸಿರುವಂತೆ ಪ್ರಾಯೋಗಿಕವಾಗಿ ಮೈಸೂರು, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಒದಗಿಸುವ ಸಂಬಂಧ ಸೊಸೈಟಿ ಪ್ರಾರಂಭಿಸುವ ಬಗ್ಗೆ.

**ಓದಲಾಗಿದೆ:**
1. ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಗುಲಬರ್ಗಾ ಪ್ರಾಂತ್ಯ, ರಾಯಚೂರು ಕಾರ್ಯಾಲಯ, ಇವರ ಆದೇಶ ಸಂಖ್ಯೆ: ಸಂನಿರಾ:ವಿ-1:ಎ.ಓ.ಟಿ: 41: 2007-08, ದಿನಾಂಕ: 16.01.2008.
2. ಆಯುಕ್ತರು, ಕಾರ್ಮಿಕ ಇಲಾಖೆ ಇವರ ಕಛೇರಿ ಪತ್ರ ಸಂಖ್ಯೆ:ಎಂಡಬ್ಲ್ಯೂ-1/ಕವೇಕಾ/ಸಿಆರ್-27/2023-24, ದಿನಾಂಕ: 01.08.2023 ಹಾಗೂ 18.09.2024.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 7 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: CMW:69:CLM: 2001, ದಿನಾಂಕ: 21/11/2001 ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಎಂ.ಡಿ. ಮಠಪತಿ, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಗುಲಬರ್ಗಾ ಪ್ರಾಂತ್, ರಾಯಚೂರು ಇವರು ಬೀದರ್ ಜಿಲ್ಲಾ ಕಾರ್ಮಿಕರ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ (ನಿ) ಬೀದರ್ ಇದನ್ನು ನೋಂದಣಿ ಮಾಡಿದ್ದು, ನೋಂದಣಿ ಸಂಖ್ಯೆ: ಸಂನಿರಾ:ವಿ-1:ಎಓಟಿ:346991/2007-08, ದಿನಾಂಕ: 16.01.2008 ರಂದು ಸಂಘಕ್ಕೆ ದಾಖಲು ಮಾಡಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಅವುಗಳ ಅಧೀನದಲ್ಲಿ ಬರುವ ನಿಗಮ/ಮಂಡಳಿಗಳು ಮತ್ತು ಖಾಸಗಿ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ಒದಗಿಸುತ್ತಿರುವ ಏಜೆನ್ಸಿಗಳಿಂದ ತೊಂದರೆಯಾಗುತ್ತಿರುವುದು ಅಂದರೆ ನಿಗದಿತ ಕನಿಷ್ಠ ವೇತನ ಪಾವತಿಸದೇ ಇರುವುದು, ಇಎಸ್‌ಐ/ಪಿಎಫ್ ಸಂದಾಯ ಮಾಡದಿರುವುದು ಹಾಗೂ ಸಕಾಲದಲ್ಲಿ ವೇತನ ನೀಡದೇ ಇರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬರುತ್ತಿದ್ದು, ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪರಿಶೀಲಿಸಲಾಗಿ ಉಲ್ಲೇಖ (1)ರಂತೆ ಬೀದರ್ ಜಿಲ್ಲೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಒದಗಿಸುವ ಹಾಗೂ ಉತ್ತಮ ಸೇವೆ ಒದಗಿಸುವ "ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ (ನಿ) ಬೀದರ್ ಸೊಸೈಟಿ"ಯು ಅಸ್ತಿತ್ವದಲ್ಲಿದ್ದು, ಈ ಸೊಸೈಟಿಯು ಸಹಕಾರ ಸಂಘಗಳ ಕಾಯ್ದೆ 1959 ಕಲಂ 7ರ ಪ್ರಕಾರ ನೋಂದಣಿಯಾಗಿದ್ದು, 2001 ರಿಂದ ಕಾರ್ಯನಿರ್ವಹಿಸುತ್ತಿದೆ. ಸದರಿ ಸೊಸೈಟಿಯ ಉದ್ದೇಶ, ಹಣಕಾಸಿನ ಮೂಲ ಇತ್ಯಾದಿ ವಿವರಗಳು ಈ ಕೆಳಕಂಡಂತಿರುತ್ತದೆ.

**ಈ ಸಂಘದ ಪ್ರಾಥಮಿಕ ಉದ್ದೇಶಗಳು**

- ಗುತ್ತಿಗೆದಾರರಿಂದ ನೌಕರರು ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವುದು ಹಾಗೂ ಗುತ್ತಿಗೆದಾರಿಕೆಯನ್ನು ಸಂಘವೇ ವಹಿಸಿಕೊಳ್ಳುವುದು.
- ಕೌಶಲ್ಯವನ್ನು ಅಭಿವೃದ್ಧಿಗೊಳಿಸುವುದು
- ಭವಿಷ್ಯನಿಧಿ ಮತ್ತು ಇ.ಎಸ್.ಐ ಸಂದಾಯವನ್ನು ನಿಯಮಾನುಸಾರ ಸಮರ್ಪಕವಾಗಿ ನಿರ್ವಹಿಸುವುದು.
- ಸಾಮಾಜಿಕ ಭದ್ರತೆಗಾಗಿ ಉಳಿತಾಯ ಮತ್ತು ಸಾಲದ ಸೌಲಭ್ಯ ಕಲ್ಪಿಸುವುದು
- ಈ ವ್ಯವಸ್ಥೆ ಮೂಲಕ ಕಾರ್ಮಿಕರನ್ನು ಮಧ್ಯವರ್ತಿಗಳ ಶೋಷಣೆಯಿಂದ ತಪ್ಪಿಸಿ ಉತ್ತಮ ಕೂಲಿ, ಕೆಲಸದ ನಿರಂತರತೆ, ಉತ್ತಮ ಸೇವೆಗಳಿಂದ ಸಾಮಾಜಿಕ ಭದ್ರತೆಯನ್ನು ಒದಗಿಸುವುದು
- ಮೈಕ್ರೋವಿಮೆ, ಮೈಕ್ರೋ ಸಾಲಗಳ ಮೂಲಕ ಉಳಿತಾಯ ಮತ್ತು ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೇವೆಗಳನ್ನು ಒದಗಿಸುವುದು
- ಸಾಲ ಸೌಲಭ್ಯ ಒದಗಿಸುವುದು.

ಈ ಸಂಘವು ಮನೆಗೆಲಸ, ಕೈತೋಟ, ಸ್ವಚ್ಛತೆ ಕೆಲಸ, ಹೋಟೆಲ್ ಸೇವೆ, ಕೃಷಿ ಮತ್ತು ಕೈಗಾರಿಕಾ ವಲಯಗಳಲ್ಲಿ ಕಾರ್ಮಿಕರನ್ನು ಒದಗಿಸುವುದು, ಹಮಾಲಿ ಕೆಲಸ, ಸರ್ಕಾರಿ ಹಾಗೂ ಅರೆ ಸರಕಾರಿ ಸಂಸ್ಥೆಗಳಲ್ಲಿ ಕೌಶಲ್ಯ ಮತ್ತು ಕೌಶಲ್ಯ ರಹಿತ ಸೇವೆ ಒದಗಿಸುವುದು, ಭದ್ರತಾ ಸೇವೆ, ವಾಹನ ಚಾಲನೆ ಹಾಗೂ ಮನೆಯ ಸೇವೆಗಳು ಇತ್ಯಾದಿ ಕೆಲಸಗಳಿಗೆ ಸಂಬಂಧಿಸಿದಂತೆ ಸೇವೆಯನ್ನು ಒದಗಿಸುತ್ತಿದೆ.

...2/-

**ಈ ಸಂಘದ ಹಣಕಾಸಿನ ಮೂಲಗಳು**

- ಷೇರು ಫೀ ಮತ್ತು ಪ್ರವೇಶ ಫೀ ಪಡೆಯುವುದರಿಂದ
- ಠೇವಣಿಗಳನ್ನು ಸ್ವೀಕರಿಸುವುದರಿಂದ
- ಗುತ್ತಿಗೆಗಳ ಮೇಲೆ ಸೇವಾ ಶುಲ್ಕ ಸ್ವೀಕರಿಸುವುದರಿಂದ
- ಸಾಲ ಪಡೆಯುವುದರಿಂದ
- ಸಾಲ ಕೊಡುವುದರ ಮೂಲಕ

**ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ (ನಿ), ಆಡಳಿತ ಮಂಡಳಿ/ಸದಸ್ಯರುಗಳ ವಿವರ**

| ಕ್ರ.ಸಂ | ಪದನಾಮ | ಅಧಿಕಾರಿಗಳು |
|---|---|---|
| 1 | ಅಧ್ಯಕ್ಷರು | ಜಿಲ್ಲಾಧಿಕಾರಿಗಳು |
| 2 | ಕಾರ್ಯದರ್ಶಿಗಳು | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ |
| 3 | ನಿರ್ದೇಶಕರು | ಯೋಜನಾ ನಿರ್ದೇಶಕರು, ಜಿ.ಬಾ.ಕಾ.ಪು.ಸಂ, |
| 4 | ನಿರ್ದೇಶಕರು | ಯೋಜನಾ ಅಧಿಕಾರಿಗಳು, ಜಿ.ಬಾ.ಕಾ.ಪು.ಸಂ, |
| 5 | ನಿರ್ದೇಶಕರು | ಸಹಕಾರ ಸಂಘಗಳ ಉಪನಿಬಂಧಕರು, |
| 6 | ನಿರ್ದೇಶಕರು | ಸದಸ್ಯರಿಂದ ಚುನಾಯಿತರು |
| 7 | ನಿರ್ದೇಶಕರು | ಸದಸ್ಯರಿಂದ ಚುನಾಯಿತರು |
| 8 | ನಿರ್ದೇಶಕರು | ಸದಸ್ಯರಿಂದ ಚುನಾಯಿತರು |
| 9 | ನಿರ್ದೇಶಕರು | ಸದಸ್ಯರಿಂದ ಚುನಾಯಿತರು |
| 10 | ನಿರ್ದೇಶಕರು | ಸದಸ್ಯರಿಂದ ಚುನಾಯಿತರು |
| 11 | ಸದಸ್ಯ ಕಾರ್ಯದರ್ಶಿ | ಜಿಲ್ಲಾ ಕಾರ್ಮಿಕ ಅಧಿಕಾರಿಗಳು |

ಈ ಸೊಸೈಟಿಯಲ್ಲಿ ಡಾಟಾ ಎಂಟ್ರಿ ಆಪರೇಟರ್, ಸ್ವಚ್ಛತಾ & ಭದ್ರತಾ ಸಿಬ್ಬಂದಿ, ಗ್ರೂಪ್ 'ಡಿ' , Technical ಇತ್ಯಾದಿಗಳಿಗೆ ಇಲಾಖೆ, ಬೋರ್ಡ್, ಕಾರ್ಪೋರೇಷನ್ ಇತ್ಯಾದಿ ಸಂಸ್ಥೆಗಳು ಯಾವ ಯಾವ ಹುದ್ದೆಯ ಕಾರ್ಮಿಕರು ಬೇಕೆಂಬ ಬಗ್ಗೆ ಬೇಡಿಕೆ ಸಲ್ಲಿಸಿದಾಗ, ಅಂತಹ ನೌಕರರುಗಳ ಸೇವೆಯನ್ನು ನೀಡಲಾಗುತ್ತದೆ ಹಾಗೂ ಸದರಿ ಸೇವೆಗೆ ಸಂಸ್ಥೆಗಳಿಂದ ವೇತನ ಹಾಗೂ ಇತರೆ ಭತ್ಯೆಗಳ ಮೊತ್ತವನ್ನು ಸ್ವೀಕರಿಸಿ ಸೊಸೈಟಿ ವತಿಯಿಂದ ನೇರವಾಗಿ ವೇತನವನ್ನು ನೌಕರರ ಖಾತೆಗೆ ಸಂದಾಯ ಮಾಡಲಾಗುತ್ತಿದೆ ಹಾಗೂ ಇಎಸ್ಐ, ಪಿಎಫ್, ಜಿಎಸ್‌ಟಿ ಇತ್ಯಾದಿಗಳೆಲ್ಲವನ್ನು ಆ ಸೊಸೈಟಿ ವತಿಯಿಂದಲೇ ನೇರವಾಗಿ ಸಂಬಂಧಿಸಿದ ಇಲಾಖೆಗಳಿಗೆ ಸಂದಾಯ ಮಾಡಲಾಗುತ್ತಿದ್ದು, ಸೊಸೈಟಿ ಒದಗಿಸುವ ಈ ರೀತಿಯ ಸೇವೆಗೆ ಪ್ರಸ್ತುತ 1% ಸೇವಾ ಶುಲ್ಕವನ್ನು ಪಡೆಯಲಾಗುತ್ತಿದೆ. ಸೇವಾ ಶುಲ್ಕ ಹಾಗೂ ಇತರೆ ಮೂಲಗಳಿಂದ ಸಂಗ್ರಹವಾಗುವ ಮೊತ್ತದಿಂದ ಸೊಸೈಟಿಯ ಸದಸ್ಯರಾದ ಎಲ್ಲಾ ಕಾರ್ಮಿಕರಿಗೆ ಸಾಲ ಸೌಲಭ್ಯ ಹಾಗೂ ಇತರೆ ಕೆಲವೊಂದು ಯೋಜನೆಗಳನ್ನು (Scheme) ರೂಪಿಸಿ ಜಾರಿಗೊಳಿಸಲಾಗುತ್ತಿದೆ. ಈ ಸೊಸೈಟಿಯಲ್ಲಿ ಸದಸ್ಯತ್ವ ಹೊಂದಿದಂತಹ ನೌಕರರು ಒಂದು ವೇಳೆ ಮೃತಪಟ್ಟಲ್ಲಿ ರೂ. 50,000/- ಗಳ ಸಹಾಯಧನ, ಕಾರ್ಮಿಕರಿಗೆ ವೇತನ ಚೀಟಿ ನೀಡಿದರೆ ಬ್ಯಾಂಕಿನಿಂದ ಸಾಲ ಸೌಲಭ್ಯ ನೀಡುವ ವ್ಯವಸ್ಥೆ ಸಹ ಇರುತ್ತದೆ. ಈ ರೀತಿ ಸೊಸೈಟಿಯಲ್ಲಿ ಸದಸ್ಯತ್ವ ಪಡೆದು ಬೇರೆ ಇಲಾಖೆಗಳಿಗೆ ನಿಯೋಜನೆಗೊಂಡ ಹೊರಗುತ್ತಿಗೆ ನೌಕರರಿಗೆ ನಿಗದಿತ ವೇತನ ಹಾಗೂ ನಿಯಮಾನುಸಾರ ಇಎಸ್ಐ/ಪಿಎಫ್ ವಂತಿಕೆ ಜಮೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಆದ್ದರಿಂದ, ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಿರುವಂತೆಯೇ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಇದೇ ಮಾದರಿಯಲ್ಲಿ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದಲ್ಲಿ ಹೊರಗುತ್ತಿಗೆ ಮೂಲಕ ನೇಮಕಗೊಳ್ಳುವ ನೌಕರರಿಗೆ ಅನುಕೂಲವಾಗುತ್ತದೆ. ಇದೊಂದು ಅಧಿಕಾರಿಗಳು ಹಾಗೂ ಕಾರ್ಮಿಕರ ಪ್ರತಿನಿಧಿಗಳನ್ನೊಳಗೊಂಡ ಸಹಕಾರ ಸಂಘವಾಗಿದ್ದು, ಕಾರ್ಮಿಕರಿಗೆ ಯಾವುದೇ ರೀತಿಯ ಅನ್ಯಾಯವಾಗುವುದಿಲ್ಲ. ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ, ಕಾರ್ಮಿಕರಿಗೆ ನೀಡಲಾಗುವ ಕಿರುಕುಳದಿಂದ ಪಾರು ಮಾಡಬಹುದಾಗಿರುತ್ತದೆ. ದುಡಿಯಲು ಅರ್ಹತೆ ಇರುವ ಕಾರ್ಮಿಕರು ಈ ಸೊಸೈಟಿಯಲ್ಲಿ ಸದಸ್ಯತ್ವ ಪಡೆದು, ನೋಂದಣಿ ಮಾಡಿಸಿಕೊಂಡಲ್ಲಿ ರೊಟೇಷನ್ ಬೇಸಿಸ್ ಮೇಲೆ ಎಲ್ಲರಿಗೂ ಕೆಲಸ ದೊರಕಿಸಿಕೊಡುವ ವ್ಯವಸ್ಥೆ ಕಲ್ಪಿಸಬಹುದಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 18.09.2024ರ ಪತ್ರದಲ್ಲಿ ಪ್ರಾಯೋಗಿಕವಾಗಿ ಮೈಸೂರು, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಒದಗಿಸುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೊಸೈಟಿಯನ್ನು ಪ್ರಾರಂಭಿಸಬಹುದಾಗಿರುತ್ತದೆ ಹಾಗೂ ಸದರಿ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳನ್ನು ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಬಹುದಾಗಿರುತ್ತದೆ ಎಂದು ತಿಳಿಸುತ್ತಾ, ಈಗಾಗಲೇ ಸಿದ್ಧಪಡಿಸಿರುವ ಮಾದರಿ ಕರಡು ಬೈಲಾದನ್ವಯ ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಬೈಲಾ ಸಿದ್ಧಪಡಿಸಿ ಸದರಿ ಸೊಸೈಟಿಯನ್ನು ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 7ರ ಪ್ರಕಾರ ನೋಂದಾಯಿಸಲು ಕ್ರಮವಹಿಸುವಂತೆ ಹಾಗೂ ಸದರಿ ಸೊಸೈಟಿ ಸ್ಥಾಪನೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಬೀದರ್ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ (ನಿ) ಬೀದರ್ ಸೊಸೈಟಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ತಂಡವು ಭೇಟಿ ನೀಡಿ ಅಧ್ಯಯನ ನಡೆಸಿ, ಸೂಕ್ತ ಮಾಹಿತಿಯನ್ನು ಸಹ ಪಡೆಯಬಹುದಾಗಿದೆ ಎಂದು ತಿಳಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ, ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ : ಕಾಇ 301 ಎಲ್‌ಡಬ್ಲ್ಯೂಎ 2023, ಬೆಂಗಳೂರು, ದಿನಾಂಕ : 01/10/2024</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ನೌಕರರನ್ನು ನಿಯೋಜಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಹಾಗೂ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 7 ರನ್ವಯ ನೋಂದಣಿಯಾಗಿರುವ ಬೀದರ್ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ ನಿಯಮಿತವು ಅಸ್ತಿತ್ವದಲ್ಲಿದ್ದು, ಸದರಿ ಸಂಘದ ಮಾದರಿಯಲ್ಲಿ ಪ್ರಸ್ತುತ ಮೈಸೂರು, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಒದಗಿಸುವ ಸಂಬಂಧ ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಈಗಾಗಲೇ ಸಿದ್ಧಪಡಿಸಿರುವ ಮಾದರಿ ಕರಡು ಬೈಲಾದನ್ವಯ ಪ್ರಾಯೋಗಿಕವಾಗಿ ಸೊಸೈಟಿ ಪ್ರಾರಂಭಿಸಲು ಹಾಗೂ 4(ಜಿ) ವಿನಾಯಿತಿಗೆ ಸಂಬಂಧಿಸಿದಂತೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು, ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 7 ರನ್ವಯ ನೋಂದಾಯಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ : ಆಇ 74 ವೆಚ್ಚ-9/2024, ದಿನಾಂಕ : 07/09/2024ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

1/10/2024

**(ಎ. ಉಮಾದೇವಿ)**
ಪೀಠಾಧಿಕಾರಿ-2
ಕಾರ್ಮಿಕ ಇಲಾಖೆ (ಕನಿಷ್ಠ ವೇತನ)

**<u>ಇವರಿಗೆ:-</u>**

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
3. ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ, ಧಾರವಾಡ.
4. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ , ವಿಧಾನಸೌಧ, ಬೆಂಗಳೂರು.
3. ಸರ್ಕಾರದ ವಿಶೇಷ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ (ಅಭಿಪ್ರಾಯ 3 & 4) , ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸಸೌಧ.
10. ಸರ್ಕಾರದ ಉಪ ಕಾರ್ಯದರ್ಶಿ-2 ರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸಸೌಧ
11. ಹೆಚ್ಚುವರಿ ಪ್ರತಿ/ಶಾಖಾ ರಕ್ಷ ಕಡತ.

**ಉದ್ದೇಶಿತ____________ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋದ್ದೇಶ**

**ಸಹಕಾರ ಸಂಘ ., ____________**

**ಉಪವಿಧಿಗಳು (ಬೈಲಾ)**

**2024-25**

# ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ ನಿಯಮಿತ

ಉದ್ದೇಶಿತ ವಿವಿದೋದ್ದೇಶ ಸಹಕಾರ ಸಂಘವು ನಿರ್ದಿಷ್ಟವಾದ ಕಾನೂನಿನಂತೆ ಅಂದರೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಂತೆ ರಚನೆಯಾಗಿದೆ.

**<u>ಈ ಕಾಯ್ದೆಯ ಲಕ್ಷಣಗಳು:</u>**

- ಸ್ವಸಹಾಯ ಮತ್ತು ಸೈದ್ಧಾಂತಿಕ ಆಧಾರದ ಮೇಲೆ ಸಹಕಾರ ಸಂಘದ ರಚನೆ
- ಸಹಕಾರ ಸಿದ್ಧಾಂತದ ಮಾರ್ಗದರ್ಶನದಲ್ಲಿ ಆರ್ಥಿಕ ಉದ್ಯಮ.
- ಸದಸ್ಯರಲ್ಲದವರ ಜೊತೆಗೂ ಸಂಬಂಧ.
- ಭಾಗೀದಾರರೂ ಹಾಗೂ ನಾಮಾಂಕಿತ ಸದಸ್ಯರಾಗಿ ನೊಂದಾಯಿಸಲು ಅವಕಾಶ.

ಈ ಮಾದರಿಯಲ್ಲಿ ಕಾರ್ಮಿಕ ಸದಸ್ಯರ ಸಹಯೋಗದಲ್ಲಿ ಕಾನೂನಿನ ಪ್ರಕಾರ ಸಹಕಾರ ಸಂಘವು ಅಸ್ತಿತ್ವಕ್ಕೆ ಬರುತ್ತದೆ. ತದನಂತರ, ಈ ಸಂಸ್ಥೆಯು "__________ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ ನಿ." ಎಂದು. ನೋಂದಾಯಿಸಲಾಗುತ್ತದೆ.

**<u>1959ರ ಕರ್ನಾಟಕ ಸಹಕಾರ ಸಂಘದ ಅಡಿಯಲ್ಲಿ ನೊಂದಣಿ:-</u>**

- ಸಹಕಾರ ಸಂಘಗಳ ನಿಬಂಧಕರಿಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು ಹಾಗೂ ಅವರ ಕೋರಿಕೆಯಂತೆ ಸಂಸ್ಥೆಯ ಎಲ್ಲಾ ಮಾಹಿತಿ ಹಾಗೂ ದಾಖಲಾತಿಗಳನ್ನು ಕೊಡಬೇಕು.
- ಸಂಸ್ಥೆಯ ಬೈಲಾ ಮತ್ತು ಇತರ ದಾಖಲೆಗಳನ್ನೊಳಗೊಂಡ ಮೂರು ಕಾಪಿಗಳನ್ನು ಅರ್ಜಿ ಜೊತೆಯಲ್ಲಿ ಕೊಡಬೇಕು. ಕನಿಷ್ಠ 10 ಸದಸ್ಯರಾದರೂ ಇರಬೇಕು.
- ಸದಸ್ಯರು ಕನಿಷ್ಠ 16 ವರ್ಷ ವಯಸ್ಸಿನವರಿರಬೇಕು.
- ಸದಸ್ಯರು ಸಂಸ್ಥೆಯ ಕಾರ್ಯಕ್ಷೇತ್ರದ ನಿವಾಸಿಗಳಿರಬೇಕು.

**ಉದ್ದೇಶಿತ ______ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ ನಿಯಮಿತದ ಉಪ ವಿಧಿ (ಬೈಲಾ) :-**
**ವ್ಯಾಖ್ಯಾನ**

a) ಸಹಕಾರ ಸಂಘದ ಕಾನೂನು:- ಕಾನೂನು ಅಂದರೆ, ಸಹಕಾರ ಸಂಘಗಳ ಕಾಯ್ದೆ, 1959 ಮತ್ತು ಇಂದಿನವರೆಗಿನ ಅದರ ತಿದ್ದುಪಡಿಗಳು.
b) ನಿಯಮಗಳು:- ಸಹಕಾರ ಸಂಘಗಳ ನಿಯಮಗಳು, 1960 ಮತ್ತು ಅದರ ತಿದ್ದುಪಡಿಗಳು,
c) ಸಹಕಾರ ಸಂಘ:- ಅಂದರೆ ಸಹಕಾರ ಕಾಯ್ದೆಯಡಿ ನೊಂದಣಿಯಾದ "ಸಹಕಾರ ಸಂಘ".
d) ಬಾಕಿದಾರರು:- ಬಾಕಿದಾರರು ಅಂದರೆ ಸಾಲ ಮರುಪಾವತಿ ಮಾಡದ ಅಥವಾ ಇತರ ಯಾವುದೇ ರೀತಿಯ ಹಣವನ್ನು ಮೂರು ತಿಂಗಳವರೆಗೆ ಮರುಪಾವತಿಸದೆ ಇರುವವರು.
e) ಕಚೇರಿಯ ಪದಾಧಿಕಾರಿಗಳು:- ಅಂದರೆ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳು.
f) ಸದಸ್ಯರು:- ಸಹಕಾರ ಸಂಘದ ಸದಸ್ಯರು.
g) ಸದಸ್ಯರ ಪ್ರತಿನಿಧಿಗಳು:- ನಿರ್ದೇಶಕರ ಮಂಡಳಿ, ಸದಸ್ಯರಿಂದ ಚುನಾಯಿತರಾದ (5 ಮಂದಿ ಪ್ರತಿನಿಧಿಗಳು ನಿರ್ದೇಶಕರು).

**II) ಸಂಘದ ಕಾರ್ಯಕ್ಷೇತ್ರ:-**

ಸಹಕಾರ ಸಂಘದ ಕಾರ್ಯಕ್ಷೇತ್ರವು __________ ಜಿಲ್ಲೆಯ _______ ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ.

**III) ಸಹಕಾರ ವರ್ಷ:-**

ಸಂಘದ ಸಹಕಾರ ವರ್ಷ ಅಂದರೆ 1ನೇ ಏಪ್ರಿಲ್‌ನಿಂದ ಮಾರ್ಚ್ 31 ರವರೆಗೆ.

IV) ಸಂಘರಚನೆ:-

A. ಈ ಸಂಘದಲ್ಲಿ ಕನಿಷ್ಠ 1000 (ಸಾವಿರ) ಕೆಲಸಗಾರರನ್ನು ಸಂಘಟಿಸಿ ನೊಂದಾಯಿಸುವುದು.
B. ಸಂಘದ ಸದಸ್ಯರು ಮುಖ್ಯವಾಗಿ ಕೌಶಲ್ಯರಹಿತ, ಅರೆ ಕೌಶಲ್ಯ ಮತ್ತು ಕೌಶಲ್ಯಯುತ ನೌಕರರಾಗಿದ್ದು ಅವರಿಗೆ ಉದ್ಯೋಗ ಒದಗಿಸುವುದು ಹಾಗೂ ಕೌಶಲ್ಯರಹಿತರಿಗೆ ಕೌಶಲ್ಯಾಭಿವೃದ್ಧಿಗೆ ಅವಕಾಶ ಮಾಡಿಕೊಡುವುದು.
C. ಸದಸ್ಯರು ಮತ್ತು ಅವರ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಸೇವೆಗಳನ್ನು ಒದಗಿಸುವುದು.

<u>ಸಂಘದ ಪ್ರಾಥಮಿಕ ಉದ್ದೇಶ</u>

1) ಕಾರ್ಮಿಕ ಗುತ್ತೇದಾರಿಯಿಂದ ಶೋಷಣೆಗೆ ಒಳಗಾಗದಂತೆ ತಡೆಯುವ ಉದ್ದೇಶದಿಂದ ಗುತ್ತೇದಾರಿಕೆಯನ್ನು ಸಂಘವೇ ವಹಿಸಿಕೊಳ್ಳುವುದು.
2) ನೌಕರರ ಕೌಶಲ್ಯವನ್ನು ಅಭಿವೃದ್ಧಿಗೊಳಿಸುವುದು.
3) ನಿಗಧಿತ ವೇತನವನ್ನು ಸಕಾಲದಲ್ಲಿ ನೌಕರರಿಗೆ ಒದಗಿಸುವುದು.
4) ಭವಿಷ್ಯನಿಧಿ ಮತ್ತು ಇ.ಎಸ್.ಐ. ವಂತಿಕೆಯನ್ನು ನಿಯಮಾನುಸಾರ ಸಕಾಲದಲ್ಲಿ ಪಾವತಿಸುವುದು.
5) ನೌಕರರ ಸಾಮಾಜಿಕ ಭದ್ರತೆಗಾಗಿ ಉಳಿತಾಯ ಮತ್ತು ಸಾಲದ ಸೌಲಭ್ಯ ಕಲ್ಪಿಸುವುದು.
6) ಸರ್ಕಾರಿ, ಅರೆ ಸರ್ಕಾರಿ ಮತ್ತು ಸ್ವಾಯತ್ತ ವಲಯಗಳಿಂದ ಮತ್ತು ಖಾಸಗಿ ವಲಯಗಳಿಂದ ನಿರ್ದಿಷ್ಟಗುತ್ತಿಗೆಗಳನ್ನು ಪಡೆದು ಸದಸ್ಯರಿಗೆ ಉದ್ಯೋಗ ಒದಗಿಸುವುದು.
7) ಈ ವ್ಯವಸ್ಥೆ ಮೂಲಕ ಕಾರ್ಮಿಕರನ್ನು ಮಧ್ಯವರ್ತಿಗಳ ಶೋಷಣೆಯಿಂದ ತಪ್ಪಿಸಿ ನಿಗಧಿತ ವೇತನ, ಕೆಲಸದ ನಿರಂತರತೆ, ಉತ್ತಮ ಸೇವೆಗಳಿಂದ ಸಾಮಾಜಿಕ ಭದ್ರತೆಯನ್ನು ಒದಗಿಸುವುದು.
8) ಮೈಕ್ರೋವಿಮೆ, ಮೈಕ್ರೋ ಸಾಲಗಳ ಮೂಲಕ ಉಳಿತಾಯ ಮತ್ತು ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೇವೆಗಳನ್ನು ಒದಗಿಸುವುದು.
9) ತರಬೇತಿ ಕಾರ್ಯಕ್ರಮಗಳ ಮೂಲಕ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸುವುದು.
10) ಸಾಲ ಸೌಲಭ್ಯ:-
   - ಸದಸ್ಯರ ಇಚ್ಛೆಯಂತೆ ಕೌಶಲ್ಯದ ಮಟ್ಟ ಉತ್ತಮಗೊಳಿಸುವುದು.
   - ಸದಸ್ಯರು ಮತ್ತು ಅವರ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಒದಗಿಸುವುದು.
   - ಸದಸ್ಯರ ಮಕ್ಕಳ ಶಿಕ್ಷಣದ ಅವಶ್ಯಕತೆಯನ್ನು ಪೂರೈಸುವುದು.

D. ಈ ಸಂಘವು ಸರ್ಕಾರಿ, ಅರೆ ಸರ್ಕಾರಿ, ಸ್ವಾಯತ್ತ ವಲಯ ಮತ್ತು ಖಾಸಗಿ ವಲಯಗಳಿಂದ ಈ ಕೆಳಗಿನ ಕೆಲಸಗಳನ್ನು ಗುತ್ತಿಗೆ ಪಡೆಯಬಹುದು.
   - ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಿಗೆ ಕೌಶಲ್ಯ ಮತ್ತು ಕೌಶಲ್ಯ ರಹಿತ ಸೇವೆ ಒದಗಿಸುವುದು.
   - ಹೋಟೆಲ್ ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಅವಶ್ಯವಿರುವ ಕೌಶಲ್ಯ ಹಾಗೂ ಕೌಶಲ್ಯ ರಹಿತ ಸೇವೆ ಒದಗಿಸುವುದು.
   - ಭದ್ರತಾ ಸೇವೆ.
   - ವಾಹನ ಚಾಲನೆ.
   - ಕೃಷಿ ಮತ್ತು ಕೈಗಾರಿಕಾ ವಲಯಗಳಲ್ಲಿ ಕಾರ್ಮಿಕರನ್ನು ಒದಗಿಸುವುದು
   - ಕೈತೋಟ, ಗುಡಿಸುವುದು ಮತ್ತು ಸ್ವಚ್ಛತೆ ಕೆಲಸ
   - ಹಮಾಲಿ ಹಾಗೂ ಇತರೆ ಸಂಬಂಧಿತ ಸೇವೆಗಳು.
   - ಮನೆಗೆಲಸ
   - .ಆರೋಗ್ಯ ಸಂಬಂಧಿತ ಕೌಶಲ್ಯ ಹಾಗೂ ಕೌಶಲ್ಯ ರಹಿತ ಸೇವೆಗಳು.

## ಸಂಘದ ಉದ್ದೇಶಗಳು

1) ಟೆಂಡರುಗಳ ಮೂಲಕ ಸಾರ್ವಜನಿಕ ಮತ್ತು ಖಾಸಗಿ ಕೆಲಸಗಳಿಗೆ ಗುತ್ತಿಗೆ ಪಡೆದು ನಿರುದ್ಯೋಗವನ್ನು ಹೋಗಲಾಡಿಸಲು ಕೌಶಲ್ಯ ಮತ್ತು ಕೌಶಲ್ಯರಹಿತ ಸದಸ್ಯರಿಗೆ ಉದ್ಯೋಗ ದೊರಕಸಿ ನಿರುದ್ಯೋಗ ಹೋಗಲಾಡಿಸಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಮತ್ತು ಸ್ವ-ಸಹಾಯ ಸಹಕಾರದಿಂದ ಕೆಲಸ ಮಾಡಲು ಸದಸ್ಯರಿಗೆ ಪ್ರೋತ್ಸಾಹ ಕೊಡುವುದು. ಉಳಿತಾಯ ಮಾಡಲು ಪ್ರೋತ್ಸಾಹಿಸುವುದು.
2) ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇಲಾಖೆಗಳ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 4(ಜಿ)ರಡಿ ವಿನಾಯಿತಿ ಪಡೆದು ಕೌಶಲ್ಯ ಹಾಗೂ ಕೌಶಲ್ಯ ರಹಿತ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಒದಗಿಸುವುದು.
3) ಸಂಘವು ಕಾರ್ಮಿಕರು ಗುತ್ತಿಗೆದಾರರಿಂದ ಶೋಷಣೆಗೆ ಒಳಗಾಗುವುದನ್ನು ತಡೆಯುವ ಗುರಿ ಹೊಂದಿದ್ದು, ಸರಿಯಾದ ಸಂಘಟನೆ ಮತ್ತು ಭದ್ರತೆ ಒದಗಿಸುವ ಮೂಲಕ ಉತ್ತಮ ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಸಂಸ್ಥೆಯು ಸ್ವತಃ ಗುತ್ತಿಗೆ ತೆಗೆದುಕೊಂಡು ಉತ್ತಮ ಸೇವೆಯನ್ನು ಯುವಕರಿಗೆ ಒದಗಿಸುವುದು.
4) ಸಂಘವು (ಕಾಲಾನುಕ್ರಮಕ್ಕನುಗುಣವಾಗಿ) ಗುತ್ತಿಗೆದಾರರಿಂದ ಒಂದು ಮೊತ್ತದ ಹಣವನ್ನು ತೆಗೆದುಕೊಂಡು ಸಂಘದ ಆಡಳಿತದ ಖರ್ಚನ್ನು ಸದಸ್ಯರ ಅನುಪಾತದಲ್ಲಿ ಕಾನೂನಿನ ಕೆಲಸಗಳಿಗಾಗಿ ಸಾಮಾಜಿಕ ಭದ್ರತೆಗಾಗಿ (ಭವಿಷ್ಯನಿಧಿ ಮತ್ತು ರಾಜ್ಯ ವಿಮೆಗಳಿಗೆ) ವಿನಿಯೋಗಿಸಲಾಗುವುದು.
5) ಸಂಘವು ತನ್ನ ಸದಸ್ಯರಿಗೆ ಸೂಕ್ತ ತರಬೇತಿಯನ್ನು ಕೊಟ್ಟು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೊಳಿಸಿ ಕೆಲಸದ ಜಾಗದಲ್ಲಿ ಅವರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ಉತ್ತಮ ಉದ್ಯೋಗವನ್ನು ಕೊಡಿಸುವ ಗುರಿಯನ್ನು ಹೊಂದಿದೆ.
6) ಸಂಘದಲ್ಲಿ ವಿವಿಧ ಮೂಲಗಳಿಂದ ಸಂಗ್ರಹವಾಗುವ ಲಾಭದಿಂದ ಉಳಿಕೆಯಾಗುವ ಹಣವನ್ನು ಸದಸ್ಯರ ಕಲ್ಯಾಣಕ್ಕಾಗಿ ಉಪಯೋಗಿಸುವುದು.
7) ಜಿಲ್ಲೆಯಲ್ಲಿ ಉದ್ಯೋಗ ಅರಸುವ ಸದಸ್ಯರಿಗೆ ಉದ್ಯೋಗ ದೊರಕಿಸಿಕೊಟ್ಟು ಅವರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.
8) ಸಂಘವು ಸದಸ್ಯರಿಗೆ ಅಭಿವೃದ್ಧಿಗಾಗಿ ಉಳಿತಾಯ ಅವಕಾಶವನ್ನು ಕಲ್ಪಿಸುತ್ತದೆ.
9) ಸಂಘದ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಏಳ್ಗೆಗಾಗಿ ಹಾಗೂ ತುರ್ತು ಸಂದರ್ಭಗಳಲ್ಲಿ ಅವಶ್ಯವಿರುವ ಹಣಕಾಸಿನ ನೆರವು ನೀಡುವ ಉದ್ದೇಶದಿಂದ ಸಾಲ ಸೌಲಭ್ಯಗಳನ್ನು ಒದಗಿಸುವುದು.
10) ಸಂಘವು ಸದಸ್ಯರ ಅನಾರೋಗ್ಯ, ಅಪಘಾತ ಅಥವಾ ನಿರುದ್ಯೋಗದ ಸಂದರ್ಭದಲ್ಲಿ ತನ್ನ ಸಾಮರ್ಥ್ಯಕ್ಕನುಸಾರವಾಗಿ ಸಹಾಯ ಮಾಡುವ ಜವಾಬ್ದಾರಿ ಹೊಂದಿರುತ್ತದೆ.
11) ಸಂಘವು ಸದಸ್ಯರ ಮೇಲೆ ಆಧಾರಿತವಾಗಿದ್ದವರಿಗೆ ಅಪಘಾತದಲ್ಲಿ ಮೃತರಾದಲ್ಲಿ ಅಥವಾ ಅಂಗಹೀನತೆಯಾಗಿ ದುಡಿಯುವ ಸಾಮರ್ಥ್ಯ ಇಲ್ಲವಾಗಿ ನಿರುದ್ಯೋಗಿಗಳಾಗಿದ್ದರೆ, ವಯಸ್ಸಾದವರಿಗೆ, ಅನಾರೋಗ್ಯದಿಂದಿದ್ದರೆ, ಅಂಥವರಿಗೆ ಕಾನೂನು ರೀತಿ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಸಹಾಯ ಮಾಡುವುದು.
12) ಸಂಘದ ಮೂಲಕ ಯಾವುದೇ ಸದಸ್ಯನು ಉದ್ಯೋಗಿಯಾದನಂತರ ಅವರಿಗೆ ಸರಿಯಾದ ಸಂಭಾವನೆ ಕೊಟ್ಟು 1970ರ ಗುತ್ತಿಗೆ ಕಾರ್ಮಿಕರ (ರೆಗ್ಯುಲೇಶನ್ ಮತ್ತು ಅಬಾಲಿಶನ್) ಕಾನೂನಿನ ಪ್ರಕಾರ ಲೆಕ್ಕಪತ್ರಗಳನ್ನು ನಿರ್ವಹಿಸುವುದು.

**ಹಣಕಾಸು:-**

ಸಂಘದ ಹಣಕಾಸಿನ ಮೂಲಗಳು:-

a) ಸದಸ್ಯರಿಂದ ಮತ್ತು ಸರ್ಕಾರದಿಂದ ಷೇರು ಹಣ
b) ಸಾಲ ಪಡೆಯುವುದರಿಂದ
c) ಠೇವಣಿಗಳನ್ನು ಸ್ವೀಕರಿಸುವುದರಿಂದ
d) ದೇಣಿಗೆ ಸ್ವೀಕರಿಸುವುದರಿಂದ
e) ಸಾಲ ಕೊಡುವುದರ ಮೂಲಕ
f) ಷೇರು ಫೀ ಮತ್ತು ಪ್ರವೇಶ ಫೀ ಪಡೆಯುವುದರಿಂದ
g) ಗುತ್ತಿಗೆಗಳ ಮೇಲೆ ಸೇವಾ ಶುಲ್ಕ ಸ್ವೀಕರಿಸುವುದರಿಂದ

**7) ಸದಸ್ಯತ್ವ:-**

ಸದಸ್ಯರು 18 ವರ್ಷಕ್ಕೆ ಮೇಲ್ಪಟ್ಟು ಸಂಘದ ಕಾರ್ಯವ್ಯಾಪ್ತಿಯ ನಿವಾಸಿಗಳಾಗಿದ್ದವರು ಸದಸ್ಯತ್ವಕ್ಕೆ ಅರ್ಹರಾಗಿದ್ದು ನಿಯಮಾನುಸಾರ ಅರ್ಜಿ ಸಲ್ಲಿಸಿ ಸದಸ್ಯತ್ವ ಪಡೆಯಬಹುದಾಗಿದ.

**8) ಷೇರು ಬಂಡವಾಳ:-**

ಷೇರು ಬಂಡವಾಳ ಸಂಗ್ರಹಿಸಲು ಯಾವುದೇ ಮಿತಿ ಇಲ್ಲ. ಪ್ರತಿ ಷೇರಿನ ಮೌಲ್ಯ ರೂ 100/- ಷೇರಿನ ಫೀ 20/- ಪ್ರವೇಶ ಶುಲ್ಕ ರೂ. 25/- ಸದಸ್ಯತ್ವದ ಅರ್ಜಿ ಜೊತೆಗೆ ಒಂದೇ ಕಂತಿನಲ್ಲಿ ಹಣ ಪಡೆಯಲಾಗುವುದು.

**9) ಆದಾಯದ ವಿವರಗಳು**

ಸಂಘವು ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇಲಾಖೆಗಳ ಅಧೀನದಲ್ಲಿ ಬರುವ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳಿಗೆ ಒದಗಿಸುವ;

a) ಸೇವೆಗಾಗಿ ಮೂಲ ಮಾಲೀಕರಿಂದ ಶೇ. 1 ರಿಂದ 10 ರವರೆಗೆ ಸೇವಾ ಶುಲ್ಕವನ್ನು ಪಡೆಯುವುದು.
b) 55% ರಿಂದ 65% ಒಟ್ಟು ಹಣದ ಮೊತ್ತವನ್ನು ಅಥವಾ ಕಾನೂನು ಅವಶ್ಯಕತೆ ಮತ್ತು ಕಾರ್ಮಿಕರ ವೇತನಕ್ಕಾಗಿ ವಿನಿಯೋಗಿಸುವುದು, ಬಾಕಿ ಉಳಿದ ಮೊತ್ತವನ್ನು ಈ ಕೆಳಕಂಡ ಹೆಡ್‌ಗಳಿಂದ ಪಡೆಯುವುದು.

   ಅ) ವಾರ್ಷಿಕ ಪ್ರವೇಶ ಶುಲ್ಕ.
   ಆ) ಷೇರು ಬಂಡವಾಳದ ಬಾಕಿ.
   ಇ) ಸದಸ್ಯರ ಕಲ್ಯಾಣಕ್ಕಾಗಿ ಪಡೆಯುವ ಹಣ.

c) ಒಟ್ಟು ಹಣದ 20 ಅಥವಾ 25% ನ್ನು ಸಾಮಾಜಿಕ ಭದ್ರತೆಗಾಗಿ ಭವಿಷ್ಯ ನಿಧಿ ಕಾಯ್ದೆ ಪ್ರಕಾರ ಮತ್ತು ರಾಜ್ಯ ವಿಮ ಕಾಯ್ದೆಯ ಪ್ರಕಾರ ಪಡೆಯಲಾಗುವುದು.
d) <u>ಉದ್ಯೋಗ ಲಭ್ಯತೆ:</u>
ದೊರೆತ ಕೆಲಸವು ಸದಸ್ಯರಲ್ಲಿ ಹಂಚಿಕೆ: ಯಾವುದೇ ಒಂದು ಸರ್ಕಾರಿ ಅಥವ ಖಾಸಗಿ ಸಂಸ್ಥೆಯಿಂದ ಗುತ್ತಿಗೆ ಪಡೆದು ಸದಸ್ಯರಿಗೆ ಕೆಲಸ ನೀಡುವಾಗ ಅವರ ಜೇಷ್ಠತೆ ಹಾಗೂ ಅವಶ್ಯವಿರುವ ಕೌಶಲ್ಯದ ಆಧಾರದ ಮೇಲೆ ಒದಗಿಸಲಾಗುವುದು.
   1) ಈ ಸದಸ್ಯರ ಕೌಶಲ್ಯದ ಆಧಾರದ ಮೇಲೆ ಒಂದು ತಿಂಗಳೊಳಗೆ ಅಥವಾ ನಿರ್ದಿಷ್ಟ ಅವಧಿಯಲ್ಲಿ ಜೇಷ್ಠತೆ ಆಧಾರದ ಮೇಲೆ ಕೆಲಸ ನೀಡಲಾಗುವುದು.
   2) ಮೊದಲ ಬಾರಿಗೆ ಸದಸ್ಯರಿಗೆ ಉದ್ಯೋಗ ದೊರಕಿ ಯಾವುದೇ ಕಾರಣದಿಂದ (ಗುತ್ತಿಗೆಯ ಮುಗಿದ ಮೇಲೆ) ಅವರು ನಿರುದ್ಯೋಗಿಗಳಾಗಿದ್ದರೆ ಎರಡನೆಯ ಸಲ ಅವರಿಗೆ ಅವಕಾಶವಿರುವುದಿಲ್ಲ. ಬದಲಿಗೆ ಅದೇ ಕೌಶಲ್ಯದ ಸದಸ್ಯನು ಅವಕಾಶ ವಂಚಿತನಾದವರಿಗೆ ಜೇಷ್ಠತೆ ಮೇರೆಗೆ ಕೆಲಸ ನೀಡಲಾಗುತ್ತದೆ.
   3) ಸಂಘವು ದೊರಕಿಸಿಕೊಡುವ ಉದ್ಯೋಗವು ಹೊರಗುತ್ತಿಗೆ ಆಧಾರದ್ದಾಗಿದ್ದು, ತಾತ್ಕಾಲಿಕ ಸ್ವರೂಪದ್ದಾಗಿದ್ದು ಖಾಯಂ ಉದ್ಯೋಗವಾಗಿರುವುದಿಲ್ಲ.

**10) ಪ್ರವೇಶಕ್ಕೆ ಅರ್ಜಿ:-**

I. ಸದಸ್ಯತ್ವ ಪಡೆಯಲು ಸಂಘದ ಅಧ್ಯಕ್ಷರಿಗೆ ಅರ್ಜಿಯ ಜೊತೆಯಲ್ಲಿ ಪ್ರವೇಶ ಶುಲ್ಕ ರೂ.25/- ಮತ್ತು ಷೇರು ಶುಲ್ಕ ರೂ. 20/- ನ್ನು ಪಾವತಿಸಬೇಕು.
II. ಪ್ರತಿಯೊಂದು ಅರ್ಜಿಯನ್ನು ನಿರ್ದೇಶಕರ ಮಂಡಳಿಯಲ್ಲಿ ಚರ್ಚಿಸಿ 15 ದಿನಗಳೊಳಗೆ ವಿಲೇವಾರಿ ಮಾಡಲಾಗುವುದು.
III. ಪ್ರವೇಶ ಪಡೆಯಲು ಸದಸ್ಯರು ಭರ್ತಿ ಮಾಡಿದ ಅರ್ಜಿಗಳನ್ನು ನಿರ್ದೇಶಕರ ಮಂಡಳಿಯು ಸ್ವೀಕರಿಸಬಹುದು ಅಥವಾ ವಿವಿಧ ಕಾರಣಗಳಿಗಾಗಿ ತಿರಸ್ಕರಿಸಬಹುದು, ತಿರಸ್ಕರಿಸಿದ ಅರ್ಜಿಗಳನ್ನು ಸಹಾಯಕ ರಿಜಿಸ್ಟ್ರಾರ್ ಸಹಕಾರ ಸಂಘ ಇವರಿಗೆ ತಿಳಿಸಲಾಗುವುದು. ಒಂದು ವೇಳೆ ಮಂಡಳಿಯು

ತಿರಸ್ಕರಿಸಿದ ಅರ್ಜಿಗಳನ್ನು ಸಹಕಾರ ಸಂಘದ ರಿಜಿಸ್ಟ್ರಾರ್‌ಗೆ 15-ದಿನಗಳೊಳಗೆ ಕಳುಹಿಸದಿದ್ದರೆ ಅರ್ಜಿದಾರನು ಸಂಘದ ಸದಸ್ಯನೆಂದು ಪರಿಗಣಿಸುವುದು.

IV. ಯಾವುದೇ ಸದಸ್ಯನು ತನ್ನ ಸದಸ್ಯತ್ವದ ಷೇರು ಹಣವನ್ನು 2 ವರ್ಷಗಳವರೆಗೆ ವರ್ಗಾಯಿಸಲು ಅಥವಾ ವಾಪಸ್ಸು ಪಡೆಯಲು ಅವಕಾಶವಿಲ್ಲ.

V. ವ್ಯವಸ್ಥಾಪಕ ಸಮಿತಿಯು ಈ ಕೆಳಗಿನ ಕಾರಣಕ್ಕಾಗಿ ಸದಸ್ಯನ ಸದಸ್ಯತ್ವವನ್ನು ರದ್ದುಗೊಳಿಸಬಹುದು;

- ಸದಸ್ಯನು ದಿವಾಳಿಯಾಗಿದ್ದರೆ, ಕಾನೂನಿನ ಪ್ರಕಾರ ಅಪರಾಧಿ ಆಗಿದ್ದರೆ ಅಥವಾ ಕೆಟ್ಟ ನಡತೆಯುಳ್ಳವರಾಗಿದ್ದರೆ.
- ಅವನು / ಅವಳು ಕಾನೂನು ಬದ್ಧವಾಗಿ ಅಪರಾಧಿಯಾಗಿದ್ದರೆ
- ಅವನು / ಅವಳು ಅವಾಚ್ಯ ಪದಗಳನ್ನು ಬಳಸಿದ ಕೆಟ್ಟನಡವಳಕೆಗಾಗಿ ವಿಚಾರಣೆಗೊಳಗಾಗಿದ್ದರೆ ಯಾವುದೇ ಕಾರಣಕ್ಕಾಗಿ ಯೋಗ್ಯವಾಗಿಲ್ಲದಿದ್ದರೆ ಸಂಘವು ಅವರನ್ನು ತೆಗೆದುಹಾಕುವ ಅಧಿಕಾರ ಹೊಂದಿದೆ.
- ಸಂಘದ ನೀತಿ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡ ಪಕ್ಷದಲ್ಲಿ.

VI. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ 17ನೇ ವಿಧಿ ಪ್ರಕಾರ ಒಬ್ಬ ಸದಸ್ಯ ಅನರ್ಹನೆಂದು ತೆಗೆದು ಹಾಕುವಾಗ ಈ ವಿಷಯವನ್ನು ಸಹಕಾರ ಸಂಘ, ಸಹಾಯಕ ನಿಬಂಧಕರಿಗೆ ಮುಂದಿನ ಕ್ರಮಕ್ಕಾಗಿ ತಿಳಸಬೇಕು.

VII. ಯಾವುದೇ ಸದಸ್ಯ ಸಂಘದ ನೋಂದಣಿ ನಂತರ 2 ವರ್ಷಗಳ ಬಳಕ ತನ್ನ ಸದಸ್ಯತ್ವ ವಾಪಸ್ಸು ಪಡೆಯಬಹುದು. ಇದಕ್ಕೆ ನಿರ್ವಹಣಾ, ಅಥವಾ ನಿರ್ದೇಶಕರ ಒಪ್ಪಿಗೆ ಬೇಕು. ಆದರೆ, ಆ ಸಂದರ್ಭದಲ್ಲಿ ಸದಸ್ಯರು ಸಂಘದಲ್ಲಿ ಯಾವುದೇ ಹಣಕಾಸು ಹಾಗೂ ಕೆಲಸದ ಬಾಕಿ ಉಳಿಸಿಕೊಂಡಿರಬಾರದು. ಆ ಗುತ್ತಿಗೆ ಮುಗಿದ ನಂತರ ಸದಸ್ಯತ್ವ ವಾಪಸ್ಸು ಪಡೆಯಬಹುದು.

VIII. ಒಬ್ಬ ಸದಸ್ಯನು ತನ್ನ ಸದಸ್ಯತ್ವವನ್ನು ಈ ಕಾರಣಗಳಿಗಾಗಿ ಕಳೆದುಕೊಳ್ಳುವನು;

1. ಮರಣ.
2. ರಾಜೀನಾಮೆ ಸ್ವೀಕಾರವಾದಾಗ.
3. ತೆಗೆದು ಹಾಕುವ ಮುಖಾಂತರ ಈ ಅಧಿಕಾರವನ್ನು ನಿರ್ದೇಶಕರ ಮಂಡಳಿ ಹೊಂದಿರುತ್ತದೆ.

IX. ಯಾವುದೇ ಸದಸ್ಯನು ತನ್ನ ಸ್ವ-ಇಚ್ಛೆಯಿಂದ ಅಥವಾ ಸಂಘವು ತೆಗೆದು ಹಾಕಿದರೆ ಅಂಥವರು ಪುನಃ ಎರಡನೇ ಬಾರಿಗೆ 2 ವರ್ಷಗಳವರೆಗೆ ಎರಡನೇ ಬಾರಿ ಪ್ರವೇಶ ಪಡೆಯುವಂತಿಲ್ಲ. ಇಂಥವರ ಭವಿಷ್ಯನಿಧಿ ಅಥವಾ ಇನ್ನ್ಯಾವುದೇ ಹಣ ಹಿಂದಕ್ಕೆ ಪಡೆಯ ಬೇಕಾಗಿದ್ದಲ್ಲಿ ಸಹಕಾರ ಸಂಘದ ನಿರ್ದೇಶಕ ಮಂಡಳಿಯ ತೀರ್ಮಾನದಂತೆ ನೀಡಲಾಗುವುದು.

**11) ಷೇರುಗಳಿಂದ ನಾಮಾಂಕಿತ:-** ಯಾವುದೇ ಸದಸ್ಯ ಮರಣ ಹೊಂದಿದರೆ ಅವನು/ಅವಳು ಸೂಚಿಸಿದ ನಾಮನಿರ್ದೇಶನ ಮಾಡಿದವರಿಗೆ ಪೂರ್ಣ ಅಥವಾ ಸ್ವಲ್ಪ ಭಾಗದ ಹಣವನ್ನು ಕೊಡಲಾಗುತ್ತದೆ.

**12) ಸಾಮಾನ್ಯ ಮಂಡಳಿಯ ಸಭೆ:-**

I. ಸದಸ್ಯರ ಸಾಮಾನ್ಯ ಮಂಡಳಿಯ ಮೊದಲ ಸಭೆಯಲ್ಲೂ, ವಾರ್ಷಿಕ ಸಭೆಯಲ್ಲಿರುವ ಪಾತ್ರ ಮತ್ತು ಅಧಿಕಾರಗಳಿರುತ್ತವೆ.

II. ಸಂಘದ ಪ್ರವೇಶಕ್ಕೆ ಕುರಿತು ಇರುವ ಎಲ್ಲ ವಿಷಯಗಳ ಅಂತಿಮ ಅಧಿಕಾರ ನಿರ್ದೇಶಕ ಮಂಡಳಿಗೆ ಇರುತ್ತದೆ. ನಿಯಮಿತವಾಗಿ ಸಂಘದ ಸಭೆ ನಡೆಸುವುದು ಮತ್ತು ಕೊನೆ ಪಕ್ಷ ವರ್ಷಕ್ಕೆ ಒಂದು ಸಲವಾದರು 30 ಸೆಪ್ಟೆಂಬರ್ ಗಿಂತ ಮೊದಲು ಸಭೆ ಸೇರಬೇಕು. ಇನ್ನುಳಿದ ಈ ಕೆಳಗಿನ ಇತರ ವಿಷಯಗಳ ಕುರಿತಾಗಿ ಸಾಮಾನ್ಯ ಮಂಡಳಿಯ ಸಭೆ ಕರೆಯಬಹುದಾಗಿದೆ;

a) ಸಮಿತಿಯು ಮಂಡಿಸಿದ ವಾರ್ಷಿಕ ವರದಿಯ ಅನುಮೋದನೆಗೆ.
b) ಇತ್ತೀಚೆಗೆ ಸಮಿತಿಯು ಮಂಡಿಸಿದ ಆಡಿಟ್ ವರದಿಯ ಅನುಮೋದನೆಗೆ.
c) ಯಾವುದಾದರು ವಿಚಾರಣೆಗಳಿದ್ದರೆ.
d) ನಿವ್ವಳ ಲಾಭದ ಕುರಿತು ಮಂಡಳಿಯ ಗಮನಕ್ಕೆ ತರಲು.
e) ಕಾರ್ಯಚರಣೆಯಲ್ಲಿ ಕಂಡುಬರುವ ಕೊರತೆಗಳು ಎಲ್ಲಾದರೂ ಇದ್ದರೆ ಮತ್ತು ಅಂತಹ ಕೊರತೆಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಲು.

f) ಸದರಿ ವರ್ಷಕ್ಕೆ ಸಮಿತಿಯು ತಯಾರಿಸಿದ ಕಾರ್ಯಕ್ರಮಗಳ ವಿವರಗಳಿಗೆ ಅನುಮೋದನ ಪಡೆಯಲು.
g) ವಾರ್ಷಿಕ ಬಜೆಟ್‌ಗೆ ಅನುಮೋದನೆ ಪಡೆಯಲು.
h) ನಿರ್ದಿಷ್ಟ ಹೂಡಿಕೆ ಮತ್ತು ಹಣಕಾಸಿನ ಬಗ್ಗೆ ಚರ್ಚಿಸಲು.
i) ಇನ್ನಿತರ ಸಹಕಾರ ಸಂಘಗಳಲ್ಲಿ ಸದರಿ ಸಂಘ ಸದಸ್ಯತ್ವ ಪಡೆಯಲು.
j) ವಾರ್ಷಿಕ ವರದಿ ಮತ್ತು ಇತರ ಯಾವುದಾದರು ಸಂಸ್ಥೆಗಳ ಲೆಕ್ಕ ಪರಿಶೀಲನೆಗಳಿದ್ದರೆ ಅವುಗಳ ಪರಿಶೀಲನೆ.
k) ಉಪ ವಿಧಿಗಳಿಗೆ ತಿದ್ದುಪಡಿ ಮಾಡಬೇಕಾದರೆ.
l) ಸಂಘದ ಸದಸ್ಯರು ಅಥವಾ ಉದ್ಯೋಗಿಗಳು ಯಾವುದಾದರೂ ತಪ್ಪು ಮಾಡಿದಲ್ಲಿ ಅವರಿಗೆ ಮುಂದಿನ ಮತ್ತು ಶಿಸ್ತಿನ ಕ್ರಮ ಕುರಿತು.
m) ಸದಸ್ಯರ ಪ್ರವೇಶ ಮತ್ತು ಸದಸ್ಯರ ಸದಸ್ಯತ್ವ ತೆಗೆದು ಹಾಕಲು.
n) ಉಪವಿಧಿಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಯದ ಬಗ್ಗೆ ಚರ್ಚಿಸಲು.

**13) ವಿಶೇಷ ಸಾಮಾನ್ಯ ಮಂಡಳಿಯ ಸಭೆ:-**

a) ನಿರ್ದೇಶಕ ಮಂಡಳಿಯು ಯಾವುದೇ ಸಮಯದಲ್ಲಿ ಸಭೆಯನ್ನು ಕರೆಯಬಹುದು 1/5 ಅಂಶದ ಅಥವಾ 100 ಸದಸ್ಯರು ಎರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಜನರು ಹಾಜರಿರಬೇಕು. ಸಾಮಾನ್ಯ ಸಭೆಯಲ್ಲಿ ಚರ್ಚೆಯಾದ ವಿಷಯಗಳನ್ನು ಮಿನಿಟ್ ಪುಸ್ತಕದಲ್ಲಿ ಬರೆದು ಅಧ್ಯಕ್ಷರ ಸಹಿ ಮಾಡಿಸಬೇಕು.
b) ಯಾವುದೇ ವಿಶೇಷ ಸಭೆಯನ್ನು ಕರೆಯಬೇಕಾಗಿದ್ದರೆ 15 ದಿನಗಳ ಮುಂಚಿತವಾಗಿ ಸದಸ್ಯರಿಗೆ ನೋಟಿಸ್ ಕಳುಹಿಸಿ ಸಭೆ ನಡೆಯುವ ದಿನಾಂಕ ಸ್ಥಳ ಮತ್ತು ಚರ್ಚಿಸಬೇಕಾದ ವಿಷಯಗಳ ಅಜೆಂಡಾವನ್ನು ನೋಟಿಸ್‌ನಲ್ಲಿ ನಮೂದಿಸಬೇಕು. 175 ಸದಸ್ಯರು ಅಥವಾ 100 ಸದಸ್ಯರ ಯಾವುದು ಕಡಿಮೆಯೋ ಆ ಕೋರಂ ಪ್ರಕಾರ ಸಭೆ ನಡೆಯಬೇಕು. ಒಂದು ವೇಳೆ ಬೇಕಾದ ಕೋರಂ ಇಲ್ಲದಿದ್ದರೆ ಹಾಜರಿದ್ದ ಸದಸ್ಯರ ಒಪ್ಪಿಗೆ ಮೇರೆಗೆ ಇನ್ನೊಂದು ದಿನ ಸಭೆ ಕರೆಯಬಹುದು. ಅಧ್ಯಕ್ಷರ ಎಲ್ಲಾ ಸಭೆಗಳನ್ನು ನಡೆಸುವರಾಗಿದ್ದು, ಅವರ ಗೈರು ಹಾಜರಿಯಲ್ಲಿ ಹಾಜರಿದ್ದ ಸದಸ್ಯರ ಒಪ್ಪಿಗೆ ಮೇರೆಗೆ ನಿರ್ದೇಶಕ ಮಂಡಳಿಯಲ್ಲಿನ ಒಬ್ಬರನ್ನು ಆ ಸಭೆಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಭೆ ನಡೆಸಬಹುದು.
c) ಹಾಜರಿರುವ ಎಲ್ಲಾ ಸದಸ್ಯರು ಒಂದೇ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.

**14) ನಿರ್ದೇಶಕರ ಮಂಡಳಿ -**

ನಿರ್ದೇಶಕ ಮಂಡಳಿಯು 12 ಜನ ಸದಸ್ಯರನ್ನೊಳಗೊಂಡಿರುತ್ತದೆ. 7 ಜನ ವಿವಿಧ ಇಲಾಖೆಗಳ ಅಧಿಕಾರಿಗಳು, 5 ಜನ ನಿರ್ದೇಶಕರು ಪ್ರತಿ ತಾಲ್ಲೂಕಿನಿಂದ ಒಬ್ಬರು ಸದಸ್ಯರಿಂದ ಚುನಾಯಿತರಾಗಿರುತ್ತಾರೆ.

| | | |
|---|---|---|
| 1) | ಅಧ್ಯಕ್ಷರು | - ಜಿಲ್ಲಾಧಿಕಾರಿ, ________ ಜಿಲ್ಲೆ |
| 2) | ಸಹ ಅಧ್ಯಕ್ಷರು | - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, |
| 3) | ಸದಸ್ಯ ಕಾರ್ಯದರ್ಶಿ | - ಕಾರ್ಮಿಕ ಅಧಿಕಾರಿ, ________ ಜಿಲ್ಲೆ |
| 4) | ಉಪ ನಿರ್ದೇಶಕರು | - ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ________ ಜಿಲ್ಲೆ |
| 5) | ನಿರ್ದೇಶಕರು | - ಸಹಕಾರ ಸಂಘಗಳ ಉಪನಿಬಂಧಕರು, ________ ಜಿಲ್ಲೆ |
| 6) | ನಿರ್ದೇಶಕರು | - ಅಧೀಕ್ಷಕ ಅಭಿಯಂತರರು, KPTCL, ________ ಜಿಲ್ಲೆ |
| 7) | ನಿರ್ದೇಶಕರು | - ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ |
| 8) | | - ಸದಸ್ಯರಿಂದ ಚುನಾಯಿತರು |
| 9) | | - ಸದಸ್ಯರಿಂದ ಚುನಾಯಿತರು |
| 10) | | - ಸದಸ್ಯರಿಂದ ಚುನಾಯಿತರು |
| 11) | | - ಸದಸ್ಯರಿಂದ ಚುನಾಯಿತರು |
| 12) | | - ಸದಸ್ಯರಿಂದ ಚುನಾಯಿತರು |

ಚುನಾಯಿತರಾದ ನಿರ್ದೇಶಕರ ಅವಧಿಯು 5 ವರ್ಷಗಳವರೆಗಿರುತ್ತದೆ. ಅವಧಿ ಮುಗಿದ ನಂತರ ಸಹಕಾರ ಸಂಘ -1959 39 ವಿಧಿ ( ) ಮತ್ತು ಸಹಕಾರ ಸಂಘಗಳ ನಿಯಮ 14 ರ ಪ್ರಕಾರ ಮುಂದಿನ ಅವಧಿಗೆ ನಿರ್ದೇಶಕರು ಚುನಾಯಿಸಲ್ಪಡುವರು.

a) ಸಂಘದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ನಿರ್ದೇಶಕರ ಮಂಡಳಿಯು 3 ತಿಂಗಳಿಗೊಮ್ಮೆ ಸಭೆ ಕರೆಯುವುದು.
b) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಗೈರು ಹಾಜರಿದ್ದಲ್ಲಿ, ಹಾಜರಿದ್ದ ನಿರ್ದೇಶಕರಲ್ಲಿ ಒಬ್ಬರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸುವುದು.
c) ಸಂಘದ ಕಾರ್ಯದರ್ಶಿಯು ಅಧ್ಯಕ್ಷರ ಜೊತೆ ಸಮಾಲೋಚಿಸಿ ಸಭೆ ನಡೆಯುವ ದಿನಾಂಕ, ಸಮಯ, ಸ್ಥಳ ಮತ್ತು ಚರ್ಚಿಸಬೇಕಾದ ವಿಷಯಗಳನ್ನೊಳಗೊಂಡ ನೋಟಿಸನ್ನು 7 ದಿನಗಳ ಮುಂಚಿತವಾಗಿ ನಿರ್ದೇಶಕರಿಗೆ ಕಳುಹಿಸಬೇಕು.
d) ಅಧ್ಯಕ್ಷರು ಪ್ರಮುಖ ವಿಷಯಗಳ ಕುರಿತು ಸಭೆ ಸೇರಿಸುವಾಗ ಎಲ್ಲಾ ನಿರ್ದೇಶಕರಿಗೆ ಸಭಾ ಸೂಚನಾ ಪತ್ರ ಹಾಗೂ ಅಜೆಂಡಾವನ್ನು ಕಳುಹಿಸಿ ಅವರ ಸಹಿ ತೆಗೆದುಕೊಳ್ಳಬೇಕು.

**15) ನಿರ್ದೇಶಕರ ಮಂಡಳಿಯ ಕರ್ತವ್ಯಗಳು :-**

ನಿರ್ದೇಶಕ ಮಂಡಳಿಯ ಕರ್ತವ್ಯಗಳು ಈ ರೀತಿಯಲ್ಲಿರುತ್ತದೆ.

a) ಸಂಘದ ಆದಾಯ ಮತ್ತು ಖರ್ಚುಗಳ ಕುರಿತಾಗಿ ಕ್ರಿಯಾಯೋಜನೆ ಸಿದ್ಧಪಡಿಸುವುದು ಮತ್ತು ಅನುಮೋದನೆ ನೀಡುವುದು.
b) ಸಂಘದ ಕಾರ್ಯ ಚಟುವಟಿಕೆಗಳ ಕುರಿತು ನಿಯಮಗಳನ್ನು ರಚಿಸುವುದು ಮತ್ತು ಅವುಗಳಿಗೆ ಅನುಮೋದನೆ ನೀಡುವುದು.
c) ಕಾನೂನಿನನ್ವಯ ಸಂಘದ ಸದಸ್ಯರ ವೇತನವನ್ನು ನಿರ್ಧರಿಸುವುದು, ಸದಸ್ಯರು ತಪ್ಪು ಮಾಡಿದಾಗ ಶಿಸ್ತು ಕ್ರಮ ತೆಗೆದುಕೊಳ್ಳಲು ನಿರ್ಧರಿಸುವುದು.
d) ಸಂಘದ ಸದಸ್ಯರನ್ನು ಸಿಬ್ಬಂದಿಯ ಹೊಸ ನೇಮಕ ಮಾಡುವುದು ಹಾಗೂ ಸಂಘದ ಸದಸ್ಯ ಮತ್ತು ಸಿಬ್ಬಂದಿ ತಪ್ಪು ಮಾಡಿದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವುದು.
e) ಗುತ್ತಿಗೆ ಆಧಾರದ ಮೇಲೆ ಪಡೆದ ಕಾರ್ಯಕ್ಕೆ ಉಪಕರಣ ಖರೀದಿಗಾಗಿ ಅಪ್ಪಣೆ ನೀಡುವುದು ಮತ್ತು ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ನಿರ್ಧರಿಸುವುದು.
f) ಸಂಘದ ಸಿಬ್ಬಂಧಿಯ ಮೇಲೆ ಏನಾದರೂ ಅಪವಾದವಿದ್ದರೆ ಅವರ ಮೇಲೆ ಸಂಘದಲ್ಲಿಯೇ ಆಂತರಿಕ ವಿಚಾರಣೆ ನಡಿಸಿ ಸತ್ಯ ಕಂಡು ಬಂದಲ್ಲಿ ಅವರನ್ನು ತೆಗೆದು ಹಾಕುವುದು.
g) ಸಂಘದ ಆಯಾ ಅವಧಿಯ ಕಾರ್ಯಚಟುವಟಿಕೆಗಳನ್ನು ಸಂಘದ ಸಿಬ್ಬಂದಿಯಲ್ಲಿ ಹಂಚಿಕೆ ಮಾಡುವುದು.
h) ಸಂಘದ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವುದು.
i) ಸಂಘದ ಕಾರ್ಯ ವೈಖರಿಯ ಬಗ್ಗೆ ವಿಚಾರಣೆ ಮಾಡುವುದು.
j) ಸಂಘದ ಕಲ್ಯಾಣಕ್ಕಾಗಿ ಮತ್ತು ಅದರ ಕಾರ್ಯ ವೈಖರಿಯ ಬಗ್ಗೆ, ಬ್ಯಾಂಕ್ ವ್ಯವಹಾರಗಳ ಬಗ್ಗೆ ಮಾಹಿತಿ ಪಡೆಯುವುದು.
k) ಸಂಘದ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದು.

**16) ಕಾರ್ಯದರ್ಶಿಯ ಕರ್ತವ್ಯಗಳು :-**

a) ಸಂಘದ ಕಾರ್ಯಕ್ರಮಗಳ ಪರಿಶೀಲನೆ ಮತ್ತು ಲೆಕ್ಕ ಪತ್ರಗಳನ್ನು ಇಟ್ಟು ಅದರಲ್ಲಿ ಸಹಿ ಹಾಕುವುದು.
b) ನಿರ್ದೇಶಕರ ಮಂಡಳಿಯ ನಿರ್ದೇಶಕರ ಅಥವಾ ಸಮಾನ ಅಧಿಕಾರಿಯ ಅಪ್ಪಣೆ ಮೇರೆಗೆ ಹಣವನ್ನು ಸ್ವೀಕರಿಸುವುದು ಮತ್ತು ವಿತರಿಸುವುದು.
c) ಟೆಂಡರ್ ಕರೆಯುವ ಮೂಲಕ ಸಾರ್ವಜನಿಕ ಅಥವಾ ಖಾಸಗಿ ವಲಯಗಳಿಂದ ಗುತ್ತಿಗೆ ಪಡೆದು ಅಥವಾ ದಿನಗೂಲಿಯ ಆಧಾರದ ಮೇಲೆ ಜಂಟಿಯಾಗಿ ಕಟ್ಟಡ, ತೋಟ ಮಾಡುವ ಮುಂತಾದ ಕೆಲಸಗಳನ್ನು ಸದಸ್ಯರಿಗೆ ಒದಗಿಸಿಕೊಡುವುದು.

d) ಕಾರ್ಮಿಕರಿಗೆ ಸರ್ಕಾರಿ ಅಥವಾ ಖಾಸಗಿ ವಲಯಗಳ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳನ್ನು ಕೊಡಿಸುವುದು.

e) ವರ್ಷಾಂತ್ಯಕ್ಕೆ ಸಂಘದ ಹಣಕಾಸಿನ ವ್ಯವಹಾರಗಳು, ರಸೀದಿಗಳು ಹಣದ ಪಾವತಿ, ಲಾಭ, ನಷ್ಟದ ಲೆಕ್ಕ ಪತ್ರ ಮತ್ತು ಬ್ಯಾಲನ್ಸ್ ಶೀಟನ್ನು ತಯಾರಿಸುವುದು.

f) ಸಹಕಾರಿ ಇಲಾಖೆಯ ಲೆಕ್ಕ ಪರಿಶೋಧಕರಿಗೆ ಸಂಘದ ಲೆಕ್ಕ ಪತ್ರಗಳ ಪರಿಶೋಧನೆಗೆ ಸಂಘದ ಪುಸ್ತಕಗಳನ್ನು ಹಾಗೂ ದಾಖಲೆಗಳನ್ನು ಒಪ್ಪಿಸುವುದು.

g) ಸಂಘದ ಎಲ್ಲಾ ಕಾರ್ಯಚಟುವಟಿಕೆಗಳು ಕಾನೂನು ಬದ್ಧವಾಗಿ ನಡೆದಿವೆ ಮತ್ತು ಸೂಕ್ತವಾಗಿವೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳುವುದು.

h) ಕಾರ್ಯದರ್ಶಿಯು ಸಂಘದ ಆಡಳಿತದ ಮುಖ್ಯಸ್ಥರಾಗಿದ್ದು, ಸಂಘದಲ್ಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇತರ ಸಿಬ್ಬಂದಿಯಿಂದ ಕೆಲಸ ಮಾಡಿಸಿ ಕೊಳ್ಳುವುದು.

17) ಸಂಪೂರ್ಣ ಷೇರುಗಳನ್ನು ಪಾವತಿಸದ ಸದಸ್ಯರಿಗೆ ಲಾಭಾಂಶ ಅಥವಾ ಬೋನಸ್ ಲಭ್ಯವಾಗುವುದಿಲ್ಲ, ಹಾಗೂ ಬಾಕಿ ಮೊತ್ತವನ್ನು ಕಂತುಗಳಲ್ಲಿ ಕಟ್ಟಬಹುದು.

18) ಸಂಘದ ಕಾರ್ಯ ಹಣವು ಸಂಘಕ್ಕೆ ಸೇರಿದ್ದು, ಸರ್ಕಾರಿ ಸಮಾನ ಅಧಿಕಾರಿಯು ನಿರ್ಧಾರ ಮಾಡಿದ ತನ್ನ ಕಾನೂನಿನ್ವಯ ವಿನಿಯೋಗಿಸಲ್ಪಡುವುದು.

19) ಕಚೇರಿಯ ವೇಳೆಯಲ್ಲಿ ಸಂಘದ ಯಾವುದೇ ಸದಸ್ಯ ಅಥವಾ ಇಲಾಖಾಧಿಕಾರಿಗಳು ದಾಖಲೆ ಪುಸ್ತಕಗಳು ಹಾಗೂ ದಾಖಲೆಗಳನ್ನು ಪರೀಕ್ಷಿಸಬಹುದು.

20) ನೋಂದಾಯಿತ ಸಹಕಾರ ಸಂಘವು ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ 1970, ರನ್ವಯ ಲೈಸನ್ಸ್ ಪಡೆಯಲು ನಿಯಮಗಳು:-

**a) ಲೈಸನ್ಸ್‌ಗಾಗಿ ಅರ್ಜಿ ಸಲ್ಲಿಸುವುದು. (ನಿಯಮ 21(1))**

1) ಗುತ್ತೇದಾರರ ಹೆಸರು ಮತ್ತು ವಿಳಾಸ (ಒಬ್ಬರೇ ಆಗಿದ್ದರೆ ತಂದೆಯ ಹೆಸರು)
2) ಜನ್ಮ ದಿನಾಂಕ ಮತ್ತು ವಯಸ್ಸು (ಒಬ್ಬರೇ ಇದ್ದರೆ)
3) ಗುತ್ತಿಗೆ ಕಾರ್ಮಿಕ ಕೆಲಸದ ವಿವರಗಳು.
   - ಸ್ಥಾಪನೆಯಾದ ಸಂಸ್ಥೆಯ ಹೆಸರು ಮತ್ತು ವಿಳಾಸ
   - ವ್ಯಾಪಾರದ, ಕಾರ್ಖಾನೆಯ, ಉತ್ಪಾದನಾ ಸ್ವರೂಪ ಅಥವಾ ಉದ್ಯೋಗದ ವಿಧಗಳು.
   - ನಿರ್ದಿಷ್ಟ ನಿಯಮದಡಿ ನೋಂದಣಿಯಾದ ಸಂಘದ ನೊಂದಾವಣಿ ಸಂಖ್ಯೆ ಮತ್ತು ದಿನಾಂಕ.
   - ಮುಖ್ಯ ಮಾಲೀಕರ ಹೆಸರು ಮತ್ತು ವಿಳಾಸ.

**b) ಕಾರ್ಮಿಕ ಗುತ್ತಿಗೆಯ ವಿವರಗಳು:-**

- ಕಾರ್ಮಿಕರ ಗುತ್ತಿಗೆಯ ಕೆಲಸದ ಸ್ವರೂಪ.
- ಕಾರ್ಮಿಕ ಗುತ್ತಿಗೆಯ ಅವಧಿ ಪ್ರಾರಂಭವಾಗುವ ಹಾಗೂ ಮುಗಿಯುವ ದಿನಾಂಕ.
- ಕೆಲಸದ ಜಾಗದಲ್ಲಿರುವ ಏಜೆಂಟ್ ಅಥವಾ ಮ್ಯಾನೇಜರನ ಹೆಸರು ಮತ್ತು ವಿಳಾಸ.
- ಯಾವುದೇ ದಿನಾಂಕ ಕೆಲಸ ಪ್ರಾರಂಭವಾಗುವ ಕಾರ್ಮಿಕ ಗುತ್ತಿಗೆಯ ಹೆಚ್ಚಿನ ಸಂಖ್ಯೆ
- ಗುತ್ತಿಗೆದಾರನು 5 ವರ್ಷಗಳಲ್ಲಿ ಯಾವುದೇ ಅಪರಾಧಕ್ಕಾಗಿ ಅಪರಾಧಿಯಾಗಿದ್ದರೆ, ವಿವರಗಳನ್ನು ಕೊಡುವುದು. ಗುತ್ತಿಗೆದಾರನ ಲೈಸೆನ್ಸ್ ರದ್ದಾಗಿದ್ದರೆ, ಅಮಾನತುಗೊಂಡಿದ್ದರೆ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿದ್ದರೆ, ಅವುಗಳ ದಿನಾಂಕ ಮತ್ತು ಆದೇಶ ಪತ್ರ.
- ಗುತ್ತಿಗೆದಾರನು 5 ವರ್ಷಗಳಲ್ಲಿ ಬೇರೆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರೆ ಅದರ ವಿವರ, ಒಡೆಯನ ಸಂಸ್ಥೆಯ ಮತ್ತು ಕೆಲಸದ ಸವರೂಪದ ವಿವರಗಳನ್ನು ಕೊಡಬೇಕು.
- ಮುಖ್ಯ ಒಡೆಯನು ಫಾರ್ಮ್ - V ಪ್ರಮಾಣ ಪತ್ರ ಲಗತ್ತಿಸಿದರೆ.
- ಲೈಸೆನ್ಸ್ ಫೀನ ಮೊತ್ತ, ಬ್ಯಾಂಕಿನ ಹೆಸರು, ಡಿಮಾಂಡ್ ಡ್ರಾಫ್ಟ್ ಸಂಖ್ಯೆ ಮತ್ತು ತಾರೀಖು.
- ಭದ್ರತಾ ಠೇವಣಿಯ ಮೊತ್ತ ಬ್ಯಾಂಕಿನ ಹೆಸರು, ಡಿಮಾಂಡ್ ಡ್ರಾಫ್ಟ್ ಸಂಖ್ಯೆ ಮತ್ತು ದಿನಾಂಕ.

**21) ಕಾರ್ಮಿಕರ ರಾಜ್ಯ ವಿಮಾ ನಿಯಮ, 1948 ಮತ್ತು ಸಂಘದ ಸದಸ್ಯರು**

ತೆಗೆದುಕೊಂಡ ಮೇಲೆ ಕೆಲಸದ ಗುತ್ತಿಗೆಗೆ ಸಂಘದ ಸದಸ್ಯರನ್ನು ಯಾವುದೇ ಕೆಲಸಕ್ಕೆ ನೇಮಿಸಿದಾಗ ಅವರು "ಕಾರ್ಮಿಕರು" ಎಂಬ ವ್ಯಾಖ್ಯಾನಡಿ 2(9)ರ ಕಾರ್ಮಿಕರ ರಾಜ್ಯ ವಿಮಾ ನಿಯಮ, 1948ರ ನಿಯಮದ ಪ್ರಕಾರ ಕಾರ್ಮಿಕರಾಗುವರು. ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವ ಕಾರ್ಮಿಕರ ವಿಮೆಯ ವಂತಿಕೆಯನ್ನು ಸಕಾಲದಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮಕ್ಕೆ ಪಾವತಿಸುವುದು.

**22) ಕಾರ್ಮಿಕರ ಭವಿಷ್ಯ ನಿಧಿ ನಿಯಮ, 1952 ಮತ್ತು ಸಂಘದ ಸದಸ್ಯರು ಇದಕ್ಕೆ ಫಲಾನುಭವಿಗಳಾಗುವರು.**

ಸಂಘಕ್ಕೆ ಲೈಸೆನ್ಸ್ ಸಿಕ್ಕಿದ ನಂತರ ಕಾರ್ಮಿಕರ ಭವಿಷ್ಯ ನಿಧಿ ನಿಯಮ, 1952ರ ಪ್ರಕಾರ ಮತ್ತು ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) 1970ರ ಪ್ರಕಾರ ಭವಿಷ್ಯ ನಿಧಿ ವಂತಿಕೆಯನ್ನು ಸಂಘದ ವತಿಯಿಂದ ಸೇವೆ ಸಲ್ಲಿಸುತ್ತಿರುವ ಮೂಲ ಮಾಲೀಕರಿಂದ ಪಡೆದು ಸದಸ್ಯರ ಖಾತೆಗೆ ಸಂದಾಯ ಮಾಡುವುದು.

**23) ಸಂಘದ ಕಾರ್ಯಕ್ರಮದಲ್ಲಿ ಸರ್ಕಾರದ ಮಧ್ಯಸ್ಥಿಕೆ:-**

ಸಂಘದ ಮುಖ್ಯ ಗುರಿ ಎಂದರೆ ಮಧ್ಯಸ್ಥಿಕೆಯ ಏಜೆಂಟರನ್ನು ತಪ್ಪಿಸಿ ಸದಸ್ಯರು ಶೋಷಣೆಗೆ ಒಳಗಾಗದಂತೆ ಮಾಡಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸರ್ಕಾರವು ಮಧ್ಯಸ್ಥಿಕೆ ವಹಿಸುವುದು.

a) ನಿರುದ್ಯೋಗಿ ಯುವಕ ಸದಸ್ಯರಿಗೆ ಉದ್ಯೋಗ ದೊರಕಿಸಿಕೊಡುವುದಕ್ಕೆ ಸರ್ಕಾರದ ಬೆಂಬಲವಿರುತ್ತದೆ. ಸರ್ಕಾರವು ಸಂಘಕ್ಕೆ ಕಲ್ಯಾಣ ಕೆಲಸ ಮಾಡುವುದಕ್ಕೆ ಭಾರತದ ಸಂವಿಧಾನದ ಪ್ರಕಾರ ಸಂಘವು ಗುತ್ತಿಗೆ ತೆಗೆದುಕೊಳ್ಳಲು ಬೇಕಾದ ಮೊತ್ತವನ್ನು ಕೊಟ್ಟನಂತರ ಪಾರದರ್ಶಕವಾಗಿ ಸಾರ್ವಜನಿಕರು ಪಡೆದುಕೊಳ್ಳುವ ನಿಯಮದಲ್ಲಿ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು.

b) ಈಗಿನ ಪರಿಸ್ಥಿತಿಯಲ್ಲಿ ಅಜ್ಞಾನಿಗಳು ಮತ್ತು ಅಸಹಾಯಕರು ಮಧ್ಯವರ್ತಿಗಳ ಶೋಷಣೆಗಳಿಗೆ ಬಲಿಯಾಗುತ್ತಿರುವುದರಿಂದ ಸರ್ಕಾರವು ಸಹಕಾರ ಸಂಘಗಳಿಗೆ ಪ್ರೋತ್ಸಾಹ ನೀಡಿ ಸಂಘಕ್ಕೆ ವಿಧಿಸಿದ ಕೆಲವು ಷರತ್ತುಗಳನ್ನು ತೆರವುಗೊಳಿಸಬೇಕು.

**24) ಇತರೆ ಸಂಸ್ಥೆಗಳ ಜೊತೆ ಸಂಪರ್ಕ:-**

ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳ ಜೊತೆ ಸಂಘವು ಸಂಪರ್ಕ ನಡೆಸಿ ನಿರುದ್ಯೋಗಿ ಯುವಕರಿಗೆ ಕೈಗಾರಿಕೆಗಳಲ್ಲಿ ಅವಶ್ಯಕವಾದ ತರಬೇತಿಯನ್ನು ಕೊಡಿಸಲು ಪ್ರಯತ್ನಿಸುವುದು. ಯತ್ನಿಸುವುದು. ತರಬೇತಿಯ ನಂತರ ಅವರು ಕುಶಲರಾದ ಮೇಲೆ ಉದ್ಯೋಗದ ಅವಕಾಶ ಕಲ್ಪಿಸಿಕೊಡುವುದು.

**25) ಇತರೆ ವಿಷಯಗಳು:-**

ಸಂಘ ಮತ್ತು ಸಂಘದ ಸದಸ್ಯರ ನಡುವೆ ಏನಾದರು ಘರ್ಷಣೆ ಏರ್ಪಟ್ಟರೆ ಸಂಘದ ಉಪನಿಬಂಧಕರಿಗೆ ಲಿಖಿತ ರೂಪದಲ್ಲಿ ತಿಳಿಸಿ ನಿರ್ಧಾರ ಕೈಗೊಳ್ಳಲು ಅರ್ಜಿ ಸಲ್ಲಿಸುವುದು ಮತ್ತು ಅವರು ನೀಡಿದ ತೀರ್ಪೇ ಅಂತಿಮವಾಗಿರುತ್ತದೆ.